# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗಧಿ ಮಾಡುವ ಬಗ್ಗೆ.

ಉಲ್ಲೇಖ:-

1. ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಪಿಐಎಂ 2021. ದಿನಾಂಕ: 10-11-2021.
2. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/ 08 / ವೈಶಿ(2)/ 2022-23. ದಿನಾಂಕ: 16-08-2022.
3. National Commission for Indian System of Medicine (NCISM), ನವದೆಹಲಿ, ಇವರ ಮಾರ್ಗಸೂಚಿ ದಿನಾಂಕ: 16-02-2022.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 08-09-2022 ರಂದು ನಡೆದ ಸಭೆಯ ನಡವಳಿ.
5. ಭಾರತ ಸರ್ಕಾರದ, ಆಯುಷ್ ಮಂತ್ರಾಲಯ, ನವದೆಹಲಿ, ಇವರ ಪತ್ರ ಸಂಖ್ಯೆ: L-14030/119/2022-EP-1. ದಿನಾಂಕ: 12-10-2022.

**********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2)ರ ಪ್ರಸ್ತಾವನೆಯಲ್ಲಿ ಆಯುಕ್ತರು, ಆಯುಷ್ ಇಲಾಖೆ, ಇವರು 2022-23ನೇ ಶೈಕ್ಷಣಿಕ ಸಾಲಿಗೆ ಶುಲ್ಕ ನಿಗಧಿ ಮಾಡುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (3)ರ NCISM National Commission for Indian System of Medicine (NCISM), ನವದೆಹಲಿ, ಇವರ ಮಾರ್ಗಸೂಚಿಯಲ್ಲಿನ ಪ್ಯಾರಾ 5 (7)ರಲ್ಲಿ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಅನುದಾನ ರಹಿತ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸೀಟುಗಳ ಪೈಕಿ ಆಲ್ ಇಂಡಿಯಾ ಕೋಟಾ ಶೇ.15 ಹಾಗೂ ಉಳಿದ ರಾಜ್ಯ ಸರ್ಕಾರದ ಕೋಟಾ ಮತ್ತು ಆಡಳಿತ ಮಂಡಳಿ ಕೋಟಾ ಸೀಟುಗಳನ್ನು ಒಳಗೊಂಡಂತೆ ಶೇ.100 ರಷ್ಟು ಸೀಟುಗಳನ್ನುಈ ಮೇಲಿನ ಮಾರ್ಗಸೂಚಿಯ ಪ್ರಕಾರ ನಮ್ಮ ರಾಜ್ಯದಲ್ಲಿ ಶೇ.85 ರಷ್ಟು ರಾಜ್ಯ ಸರ್ಕಾರದ ಕಾಲೇಜಿನ ಮತ್ತು ಅನುದಾನಿತ ಕಾಲೇಜುಗಳಲ್ಲಿ ಶೇ.85ರಷ್ಟು ಸೀಟುಗಳನ್ನು ಹಾಗೂ ಖಾಸಗಿ ಕಾಲೇಜುಗಳ ಶೇ.100ರಷ್ಟು ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಲೇ ಹಂಚಿಕ ಮಾಡಬೇಕಾಗಿರುತ್ತದೆ.

**" (7)(i) All seats irespctive of category (central quota, state quota or management etc.) expect foreign nationals are to be admitted trough counselling (central, state or UT) only. Direct admission by any means other than above specified shall not be approved"**

ಮುಂದುವರೆದು ಉಲ್ಲೇಖ (5)ರಲ್ಲಿ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಶೇ.15 ಆಲ್ ಇಂಡಿಯಾ ಕೋಟಾದ (AIQ) ಸೀಟುಗಳನ್ನು AACCC, ಆಯುಷ್ ಮಂತ್ರಾಲಯದ ಮೂಲಕ ಹಂಚಿಕೆ ಮಾಡಲು ಆಯುಷ್ ಮಂತ್ರಾಲಯ ನಿರ್ಧರಿಸಿದೆ. ಆದರೆ ಖಾಸಗಿ ಕಾಲೇಜುಗಳ ಶೇ.15 ಅಲ್ ಇಂಡಿಯಾ ಕೋಟಾದ (AIQ) ಸೀಟುಗಳನ್ನು ರಾಜ್ಯ ಕೌನ್ಸಿಲಿಂಗ್ ಏಜನ್ಸಿ ಮೂಲಕವೇ ಹಂಚಿಕೆ ಮಾಡುವಂತೆ ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (4)ರ ನಡವಳಿವಯಲ್ಲಿ ರಾಜ್ಯ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಫೇಡರೇಷನ್ ಹಾಗೂ ಆಡಳಿತ ಮಂಡಳಿಗಳ ಪ್ರತಿನಿದಿಗಳು, ಈ ನಿಯಮಾವಳಿಯನ್ವಯ ರಾಜ್ಯ ಸರ್ಕಾರ ಪಾಲನೆ ಮಾಡಿ ಮುಂದುವರೆಯುವುದಾದರೆ ಆಡಳಿತ ಮಂಡಳಿ ಕೋಟಾಗೆ ನಿಗಧಿಪಡಿಸಿರುವ ಶುಲ್ಕವನ್ನು ಪರಿಷ್ಕರಿಸಿ ವಾರ್ಷಿಕ ರೂ.6.00 ಲಕ್ಷಗಳಿಗೇರಿಸಲು ಕೋರಿರುತ್ತಾರೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಕೋವಿಡ್-19ರಿಂದ ಜನ ಸಾಮಾನ್ಯರು ಆರ್ಥಿಕ ಸಂಕಷ್ಟವನ್ನು ಎದುರುಸುತ್ತಿದ್ದು ಇಂತಹ ಸನ್ನಿವೇಶದಲ್ಲಿ ಶುಲ್ಕವನ್ನು ಹೆಚ್ಚಿಸುವುದು ಸೂಕ್ತವಾಗಿರುವುದಿಲ್ಲ. ಆದ್ದರಿಂದ ಆಯುರ್ವೇದ ಮತ್ತು ಯನಾನಿ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಭಾರತ ಸರ್ಕಾರದ ಕೋಟಾ, ರಾಜ್ಯ ಸರ್ಕಾರದ ಕೋಟಾ, ಆಡಳಿತ ಮಂಡಳಿ ಕೋಟಾ ಹಾಗೂ N.R.I. ಕೋಟಾ ಸೀಟುಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಕಳೆದ ವರ್ಷದಲ್ಲಿ ನಿಗಧಿಪಡಿಸಿರುವ ಶುಲ್ಕವನ್ನು 2022-23ನೇ ಶೈಕ್ಷಣಿಕ ಸಾಲಿಗೂ ಮುಂದುರೆಸಲು ತೀರ್ಮಾನಿಸಲಾಗಿದೆ.

ಮುಂದುವರೆದು NCISMನ ದಿನಾಂಕ:16-02-2022ರ ಮಾರ್ಗಸೂಚಿಗಳನ್ವಯ ಸರ್ಕಾರಿ ಕಾಲೇಜಿನ ಶೇ.85ರಷ್ಟು ಸೀಟುಗಳು, ಅನುದಾನಿತ ಕಾಲೇಜಿನ ರಾಜ್ಯ ಸರ್ಕಾರದ ಕೋಟಾ ಶೇ.65 ರಷ್ಟು ಸೀಟುಗಳನ್ನು, ಖಾಸಗಿ ಕಾಲೇಜುಗಳ ರಾಜ್ಯ ಸರ್ಕಾರದ ಕೋಟಾ ಶೇ.25ರಷ್ಟು ಸೀಟುಗಳನ್ನು, ಅನುದಾನಿತ ಕಾಲೇಜುಗಳ ಶೇ.20ರಷ್ಟು ಆಡಳಿತ ಮಂಡಳಿಯ ಸೀಟುಗಳನ್ನು, ಖಾಸಗಿ ಕಾಲೇಜುಗಳ ಶೇ.60 ರಷ್ಟು ಆಡಳಿತ ಮಂಡಳಿಯ ಆಲ್ ಇಂಡಿಯಾ ಕೋಟಾ ಶೇ.15 ರಷ್ಟು (ಒಟ್ಟು ಶೇ.100ರಷ್ಟು) ಸೀಟುಗಳನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕವೇ ಹಂಚಿಕೆ ಮಾಡಬೇಕಾಗಿರುತ್ತದೆ.ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 253 ಪಿಐಎಂ 2022,</u>**
**<u>ಬೆಂಗಳೂರು, ದಿನಾಂಕ: 29.10.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಿದೆ.

<u>ಪದವಿ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ</u>

<u>ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ.</u>

<u>ಆಯುರ್ವೇದ ಮತ್ತು ಯುನಾನಿ(B.A.M.S & B.U. M.S) ಕೋರ್ಸ್‌ಗಳಿಗೆ</u>

..3/-

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು (AIQ) (ಭಾರತ ಸರ್ಕಾರದ ಕೌನ್ಸಿಲಿಂಗ್ AACCC ಏಜೆನ್ಸಿ ಮೂಲಕ ಹಂಚಿಕೆ ಮಾಡುವುದು) | ಶೇ.15 | ರೂ.25,000/- |
| 2 | ರಾಜ್ಯ ಸರ್ಕಾರದ ಸೀಟುಗಳು. (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.85 | ರೂ. 25,000/- |

**ಆ) ಖಾಸಗಿ ಅನುದಾನಿತ ಮಹಾವಿದ್ಯಾಲಯಗಳಲ್ಲಿ.**

**ಆಯುರ್ವೇದ ಮತ್ತು ಯುನಾನಿ (B.A.M.S & B.U.M.S) ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು (AIQ) ಭಾರತ ಸರ್ಕಾರದ ಕೌನ್ಸಿಲಿಂ ಗ್ಏಜೆನ್ಸಿ AACCC ಮೂಲಕ ಹಂ ಚಿಕೆಮಾಡುವುದು ) | ಶೇ.15 | ರೂ.45,000/- |
| 2 | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.65 | ರೂ.45,000/- |
| 3 | ಆಡಳಿತ ಮಂಡಳಿಕೋಟಾ ಸೀಟುಗಳು.(ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.20 | ರೂ.1,83,750/- |

**ಇ) ಖಾಸಗಿ ಅನುದಾನ ರಹಿತ ಮಹಾವಿದ್ಯಾಲಯಗಳಲ್ಲಿ.**

**ಆಯುರ್ವೇದ ಮತ್ತು ಯುನಾನಿ (B.A.M.S & B.U.M.S) ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂ ಚಿಕೆ | ಅನು ಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು(AIQ) ( ಕೆ.ಇ.ಎ ಮೂಲಕ ಹಂಚಿಕೆ ಮಾಡುವುದು) | ಶೇ.15 | ರೂ.2,00,000/- |

SRG

.......4

| | | | |
|---|---|---|---|
| 2 | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.25 | ರೂ.60,000/- |
| 3 | ಅಡಳಿತ ಮಂಡಳಿಕೋಟಾ ಸೀಟುಗಳು. (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ. 40 | ರೂ.2,20,500/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.20 | ರೂ.7,00,000/- |

**ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ.**

**ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ**

**ಆಯುರ್ವೇದ ಮತ್ತು ಯುನಾನಿ (AYURVEDA MD/MS & UNANI MD/MS) ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು (AIQ)(ಭಾರತ ಸರ್ಕಾರದ ಕೌನ್ಸಿಲಿಂಗ್ ಏಜೆನ್ಸಿ AACCC ಮೂಲಕ ಹಂಚಿಕೆ ಮಾಡುವುದು ) | ಶೇ.15 | ರೂ.50,000/- |
| 2 | ರಾಜ್ಯ ಸರ್ಕಾರದ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.85 | ರೂ. 50.000/- |

**ಆ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ**

**ಆಯುರ್ವೇದ ಮತ್ತು ಯುನಾನಿ (AYURVEDA MD/MS & UNANI MD/MS) ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು (AIQ) ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.15 | ರೂ.3,67,500/- |
| 2 | ರಾಜ್ಯ ಸರ್ಕಾರದ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ.25% | ರೂ.1,00,000/- |
| 3 | ಅಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು). | ಶೇ.40% | ರೂ.3,67,500/- |

....5

| | | | |
|---|---|---|---|
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು). | ಶೇ.20% | ರೂ.14,00,000/- |

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗಧಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಭಾರತ ಸರ್ಕಾರದ ಕೌನ್ಸಿಲಿಂಗ್‌ಏಜೇನ್ಸಿಯಿಂದ AACCC ಹಂಚಿಕೆ ಮಾಡುವ ಭಾರತ ಸರ್ಕಾರದ ಕೋಟಾ ಸೀಟುಗಳಲ್ಲಿ ಭರ್ತಿಯಾಗದೆ ಉಳಿಯುವ ಸೀಟುಗಳನ್ನು ಅದೇ ಶುಲ್ಕದಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಿಯಮಾನುಸಾರ ಸೀಟು ಹಂಚಿಕೆ ಮಾಡತಕ್ಕದು.

ಮುಂದುವರೆದು ಉಲ್ಲೇಖ (3)ರ NCISMನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು. ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಗಳು ತಮ್ಮ ಹಂತದಲ್ಲಿ ಆಡಳಿತ ಮಂಡಳಿಯ ಸೀಟುಗಳನ್ನು ತುಂಬಿಕೊಳ್ಳುವುದನ್ನು ನಿಷೇದಿಸಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

SR Gorawar
29/10/2022

(ಶೈಲಾ ಆರ್.ಗೊರವರ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ/ಇ & ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329. ಬೆಂಗಳೂರು – 560001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4. ಆಯುಕ್ತರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560 009.
5. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಫೆಡರೇಷನ್, ಗದಗ.

**<u>ಪ್ರತಿಗಳು:</u>**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 253 ಪಿಐಎಮ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18.11.2022.

### ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಆಕುಕ 253 ಪಿಐಎಮ್ 2022, ದಿನಾಂಕ: 29.10.2022ರ ಆದೇಶ ಭಾಗದ (ಆ) ರಡಿ ಕ್ರಮ ಸಂಖ್ಯೆ: (3) ನ್ನು ಈ ಕೆಳಕಂಡಂತೆ ಅದರ ಎದುರಿಗೆ ನಮೂದಿಸಿರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

| **ಸರ್ಕಾರದ ಆದೇಶ ಸಂಖ್ಯೆ: ಆಕುಕ 253 ಪಿಐಎಮ್ 2022, ದಿನಾಂಕ: 29.10.2022ರ ಆದೇಶ ಭಾಗದ (ಆ) ಖಾಸಗಿ ಅನುದಾನಿತ ಮಹಾವಿದ್ಯಾಲಯಗಳಲ್ಲಿ ಆಯುರ್ವೇದ ಮತ್ತು ಯುನಾನಿ (BAMS & BUMS) ಕೋರ್ಸ್‌ಗಳಿಗೆ** | **ತಿದ್ದಿ ಓದಿಕೊಳ್ಳುವುದು** |
|---|---|
| ಆಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ ಮೂಲಕ ಹಂಚಿಕೆ ಮಾಡುವುದು) – ಶೇ.20, ರೂ. 1,83,750/- | NRI/ ಆಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ ಮೂಲಕ ಹಂಚಿಕೆ ಮಾಡುವುದು) – ಶೇ.20, ರೂ. 7,00,000/- |

ಉಳಿದಂತೆ, ಆದೇಶದಲ್ಲಿನ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

S R Goravar 18/11/2022
(ಶೈಲಾ ಆರ್.ಗೊರವರ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್.ಎಸ್.ಎ/ಇ & ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329. ಬೆಂಗಳೂರು – 560001.
3. ಆಯುಕ್ತರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560 009.
4. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್ , ಜಯನಗರ, ಬೆಂಗಳೂರು.

5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಖಾಸಗಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಅಸೋಸಿಯೇಷನ್. ಬೆಂಗಳೂರು. [illegible]
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**<u>ಪ್ರತಿಗಳು:</u>**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮತ್ತು ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಪಿಐಎಂ 2021, ದಿನಾಂಕ:10-11-2021.
2. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/ 08 / ವೈಶಿ(2)/ 2022-23, ದಿನಾಂಕ: 16-08-2022.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 08-09-2022ರಂದು ನಡೆದ ಸಭೆಯ ನಡವಳಿ.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2)ರ ಪ್ರಸ್ತಾವನೆಯಲ್ಲಿ ಆಯುಕ್ತರು, ಆಯುಷ್ ಇಲಾಖೆ, ಇವರು 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿರ್ಧರಣೆಯ ಬಗ್ಗೆ ಸರ್ಕಾರದ ಹಂತದಲ್ಲಿ ಸಭೆ ಏರ್ಪಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರ ನಡವಳಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಇವರ ರಾಜ್ಯ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಫೇಡರೇಷನ್ ಹಾಗೂ ಕರ್ನಾಟಕ ಖಾಸಗಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಅಸೋಸಿಯೇಷನ್ ಮತ್ತು ವಿವಿಧ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಪದಾಧಿಕಾರಿಗಳು ಮತ್ತು ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ , ಅನುದಾನ ರಹಿತ ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮತ್ತು ಹೋಮಿಯೋಪತಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು 2021-22ನೇ

ಸಾಲಿನಲ್ಲಿ ನಿಗದಿಪಡಿಸಿರುವುದನ್ನು 2022-23ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಲು ಸರ್ಕಾರವು ನಿರ್ಧರಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾದ ಆದೇಶ ಸಂಖ್ಯೆ: ಆಕುಕ 253 ಪಿಐಎಂ 2022,**
**ಬೆಂಗಳೂರು, ದಿನಾಂಕ: 13.10.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮತ್ತು ಹೋಮಿಯೋಪತಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

**ಪದವಿ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ**

**ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ.**

**ಬಿ.ಎನ್.ವೈ.ಎಸ್. ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.100 | ರೂ. 25,000/- |

**ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ. 25,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ. 85 | ರೂ.25,000/- |

**ಆ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ**
**ಬಿ.ಎನ್.ವೈ.ಎಸ್. ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.20 | ರೂ.60,000/- |
| 2 | ಕೆ.ಇ.ಎ. ಭರ್ತಿಮಾಡುವ ಆಡಳಿತ ಮಂಡಳಿ ಸೀಟುಗಳು. | ಶೇ.20 | ರೂ.1,83,750/- |
| 3 | ಅಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ.2,20,500/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.7,00,00/- |

...3

**ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,00,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.60,000/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ. 40 | ರೂ.2,20,500/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.7,00,000/- |

**ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ**

**ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ**

**ಸ್ನಾತಕೋತ್ತರ ಹೋಮಿಯೋಪತಿ ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.50,000/- |
| 2. | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ. 50,000/- |

**ಆ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ**

**ಸ್ನಾತಕೋತ್ತರ ಹೋಮಿಯೋಪತಿ ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.3,67,500/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ,1,00,000/- |
| 3 | ಅಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ.3,67,500/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.14,00,000/- |

...4

**ಸ್ನಾತಕೋತ್ತರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.25% | ರೂ.1,00,000/- |
| 2 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.55% | ರೂ.3,67,500/- |
| 3 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20% | ರೂ.14,00,000/- |

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗಧಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಭಾರತ ಸರ್ಕಾರದ ಕೋಟಾ ಸೀಟುಗಳಲ್ಲಿ ಭರ್ತಿಯಾಗದೆ ಉಳಿಯುವ ಸೀಟುಗಳನ್ನು ಅದೇ ಶುಲ್ಕದಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಿಯಮಾನುಸಾರ ಸೀಟು ಹಂಚಿಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

S R Gorawar
13/10/2022
(ಶೈಲಾ ಆರ್.ಗೊರವರ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್.ಎಸ್.ಎ/ಇ & ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329. ಬೆಂಗಳೂರು – 560001.
3. ಆಯುಕ್ತರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560 009.
4. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

## ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 253 ಪಿಐಎಂ 2022 (ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.02.2023.

### ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಆಕುಕ 253 ಪಿಐಎಂ 2022, ದಿನಾಂಕ: 29.10.2022 ರ ಆದೇಶ ಭಾಗದ (ಇ) ಅಡಿಯ ಕ್ರ. ಸಂ. (3) ನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು:-

**ಇ) ಖಾಸಗಿ ಅನುದಾನ ರಹಿತ ಮಹಾವಿದ್ಯಾಲಯಗಳಲ್ಲಿ ಆಯುರ್ವೇದ ಮತ್ತು ಯುನಾನಿ (B.A.M.S & B.U.M.S) ಕೋರ್ಸ್‌ಗಳಿಗೆ**

| ಕ್ರ. ಸಂ | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ) |
|---|---|---|---|
| 3. | ಆಡಳಿತ ಮಂಡಳಿ ಕೋಟಾ ಸೀಟುಗಳು (ಕೆ.ಇ.ಎ. ಮೂಲಕ ಹಂಚಿಕೆ ಮಾಡುವುದು) | ಶೇ. 40 | ರೂ. 3,50,000/- |

ಉಳಿದಂತೆ ಈ ಕೆಳಕಂಡ ಆದೇಶಗಳಲ್ಲಿನ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ:-

(i) 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕಗಳಿಗೆ ಸಂಬಂಧಿಸಿದಂತೆ ದಿನಾಂಕ: 29.10.2022 ರಂದು ಹೊರಡಿಸಿದ ಸರ್ಕಾರದ ಆದೇಶ ಹಾಗೂ ದಿನಾಂಕ: 18.11.2022 ರ ತಿದ್ದುಪಡಿ ಆದೇಶಗಳು

ಹಾಗೂ

(ii) 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮತ್ತು ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕಗಳಿಗೆ ಸಂಬಂಧಿಸಿದಂತೆ ದಿನಾಂಕ: 13.10.2022 ರಂದು ಹೊರಡಿಸಿದ ಸರ್ಕಾರದ ಆದೇಶ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

2/2/23
**(ಎಸ್. ಪುಷ್ಪ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್. ಎ/ ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ:5329, ಬೆಂಗಳೂರು-560001.

.....2

3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-560009.
4. ಕುಲಸಚಿವರು, RGUHS, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಫೆಡರೇಷನ್, ಗದಗ / ಕರ್ನಾಟಕ ರಾಜ್ಯ ಖಾಸಗಿ ಆಯುರ್ವೇದ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳ ಫೆಡರೇಷನ್ (ರಿ) ಗಜೇಂದ್ರಗಡ.
7. ಕಾರ್ಯದರ್ಶಿ, ಕರ್ನಾಟಕ ಖಾಸಗಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಅಸೋಸಿಯೇಷನ್, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.